## ನಿವೇದನೆ

# ಮೈದುಂಬಿದ ಯಮುನೆ ಹೇಳುತ್ತಿರುವ ಪಾಠಗಳು...

ವೈಜ್ಞಾನಿಕ ನೆಲೆಗಟ್ಟಿಲ್ಲದ, ಮಾನವೀಯ ಸ್ಪಂದನಗಳೂ ಇಲ್ಲದ ಅಭಿವೃದ್ಧಿ ಕಾರ್ಯಕ್ರಮಗಳು ಪರಿಸರದ ಲಯ ತಪ್ಪಲು ಕಾರಣವಾಗುತ್ತವೆ. ಪರಿಸರದ ನಕ್ಷೆಯಲ್ಲಿ ಉಂಟಾದ ಬದಲಾವಣೆಯಂತೆ ಕಾಣಿಸುವ ಬಹುತೇಕ ಪ್ರಾಕೃತಿಕ ವಿಕೋಪಗಳ ಹಿಂದಿರುವುದು ಮನುಷ್ಯನ ಹಸ್ತಕ್ಷೇಪವೇ.



ಈಶ್ವರ್

ಹೊಂಜಿನ ಮುಸುಕಿಗೆ ಒಗ್ಗಿಕೊಂಡಂತಿರುವ ಮಹಾನಗರಿ ದೆಹಲಿಯ ನಾಗರಿಕರು ಮೈದುಂಬಿಕೊಂಡಿರುವ ಯಮುನೆಯನ್ನು ನೋಡಿ ಕಣ್ಣರಳಿಸಿದ್ದಾರೆ. ನಮ್ಮ ಬೆಂಗಳೂರಿನ ವೃಷಭಾವತಿಯ ದೊಡ್ಡಕ್ಕನಂತಿರುವವಳು ಯಮುನೆ. ಒಮ್ಮೆಗೇ ಯಾವುದೋ ಹಳೆಯ ನೆನಪೊಂದನ್ನು ಆವಾಹಿಸಿಕೊಂಡಂತೆ ಈಗ ಮೈದುಂಬಿಕೊಂಡಿದ್ದಾಳೆ. ಸುಮಾರು ನಾಲ್ಕು ದಶಕಗಳ ನಂತರ ತುಳುಕಿ ಹರಿಯುತ್ತಿರುವ ನದಿಯ ಓಡುನಡಿಗೆ ಬೆರಗಿನಂತೆ ಕಾಣುತ್ತಿದೆ; ನದಿಯ ಪೂರದಿಂದ ಸಂಕಷ್ಟಕ್ಕೆ ಒಳಗಾದವರಿಗೆ ದುಸ್ವಪ್ನವಾಗಿ ತೋರುತ್ತಿದೆ. ಜೀವನದಿಯಾಗಿದ್ದ ಯಮುನೆ, ದೆಹಲಿ ಬೆಳೆದಂತೆಲ್ಲ ತನ್ನ ಚಹರೆಯನ್ನು ಕಳೆದುಕೊಂಡು ಮಹಾನಗರದ ಕಸಕೊಳಚೆಯನ್ನು ತುಂಬಿಕೊಳ್ಳುವ ಬೃಹತ್ ಮೋರಿಯ ರೂಪ ಪಡೆದುಕೊಂಡಿತ್ತು. ಬೆಂಗಳೂರಿನ ದೇಹ ಅಸಹಜವಾಗಿ ಕೊಬ್ಬು ಹೆಚ್ಚಿಸಿಕೊಂಡಂತೆ ವೃಷಭಾವತಿಯೂ ಪಳೆಯುಳಿಕೆಯಾಯಿತಷ್ಟೇ. ನದಿಗೆ ಹೊಂದಿಕೊಂಡ ನಗರಗಳು ಎಲ್ಲೆ ಮೀರಿ ಬೆಳೆದಾಗ ಅವುಗಳು ‘ನಗರಕ್ಕೆ ಹಾರ’ವಾಗಿ, ಹೊಳೆಗಳ ನೆನಪುಗಳೇ ಮರೆವಿಗೆ ಸಂದುಬಿಟ್ಟಿರುವ ಉದಾಹರಣೆಗಳು ಸಾಕಷ್ಟಿವೆ. ದೆಹಲಿ–ಯಮುನೆ ಇಂಥ ಉದಾಹರಣೆಗಳಲ್ಲೊಂದು. ಆದರೀಗ ಯಮುನೆ ಮೈದುಂಬಿಕೊಂಡು ತನ್ನ ಇರುವನ್ನು ಪ್ರಕಟಪಡಿಸುತ್ತಿದೆ. ನಗರಗಳ ಬಕಾಸುರ ಹೊಟ್ಟೆಗಳಲ್ಲಿರುವ ನದಿಗಳೆಲ್ಲ ಯಮುನೆಯಂತೆ ಹರಿಯತೊಡಗಿದರೆ ನಮ್ಮ ನಾಗರಿಕ ವ್ಯವಸ್ಥೆ ಇಸ್ಪೀಟಿನ ಎಲೆಗಳ ಮನೆಯಂತೆ ಕುಸಿದುಬಿದ್ದೀತು.

ಉತ್ತರ ಭಾರತದ ವಿಷಯವಿರಲಿ, ನಮ್ಮ ಹಿತ್ತಲು–ಅಂಗಳದ ಸ್ಥಿತಿಗತಿಯೂ ಸಹ್ಯವಾಗಿಲ್ಲ. ಕೊಡಗಿನಲ್ಲಿ ಗುಡ್ಡಗಳು ಕುಸಿದು ನಾಗರಿಕ ವ್ಯವಸ್ಥೆ ಗುಂಡಿಪಾಲಾಗುವುದನ್ನು ಇತ್ತೀಚಿನ ವರ್ಷಗಳಲ್ಲಿ ಕಾಣುತ್ತಿದ್ದೇವೆ. ಕರಾವಳಿ ಕೂಡ ಒಂಟಿಕಾಲಿನಲ್ಲಿ ನಿಂತಿರುವಂತೆ ಕಾಣಿಸುತ್ತಿದೆ. ಯಾಕೆ ಹೀಗೆ ಎಂದು ಕೆದಕಿದರೆ ಮತ್ತದೇ ಅಭಿವೃದ್ಧಿಯ ಹೆಸರಿನ ಹಸ್ತಕ್ಷೇಪಗಳು. ವೈಜ್ಞಾನಿಕ ನೆಲೆಗಟ್ಟಿಲ್ಲದ, ಮಾನವೀಯ ಸ್ಪಂದನಗಳೂ ಇಲ್ಲದ ಅಭಿವೃದ್ಧಿ ಕಾರ್ಯಕ್ರಮಗಳು ಸೃಷ್ಟಿಸಿರುವ ದುರಂತಗಳಿವು. ಮನುಷ್ಯನ ಸ್ವಾರ್ಥವೇ ಮೈದಳೆದಂತೆ ಜೆಸಿಬಿ, ಬುಲ್ಡೋಜರ್‌ನಂಥ ಯಂತ್ರಗಳೂ, ಮರ ಕತ್ತರಿಸುವ ಸಲಕರಣೆಗಳೂ ಕಾಣಿಸುತ್ತಿವೆ. ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ಕಾಡಿನ ಕೆಲವು ಸಸ್ಯಗಳು ವಾತಾವರಣ ವೈಪರೀತ್ಯದಿಂದ ಏದುಸಿರು ಬಿಡುತ್ತಿರುವ ವಿಷಯವನ್ನು ಕಳೆದ ಬೇಸಗೆಯಲ್ಲಿ ಕೆಲವು ತಜ್ಞರು ಗುರ್ತಿಸಿದ್ದರು; ಸುರಗಿ, ಉಪ್ಪಗೆ, ಮುರುಗಲಿನಂಥ ಮರಗಳ ದ್ಯುತಿ ಸಂಶ್ಲೇಷಣೆ ಕ್ರಿಯೆಯ ಮೇಲೆ ತಾಪಮಾನದ ಬದಲಾವಣೆ ಪರಿಣಾಮ ಬೀರಿದೆ ಎಂದು ವಿಶ್ಲೇಷಿಸಿದ್ದರು.

ದೆಹಲಿಯ ಪರಿಸರದ ನಂಜು, ಯಮುನೆಯ ಪುನರ್ಜನ್ಮದ ನೆನಹು, ಕೊಡಗಿನ ಗುಡ್ಡಗಳ ಜರಿಯುವಿಕೆ, ಪ್ರವಾಹದಿಂದ ಕೊಚ್ಚಿಹೋದ ಕೃಷಿಭೂಮಿ, ಕರಾವಳಿಯ ಕೆಲವು ಪ್ರದೇಶಗಳಲ್ಲಿ ತಲೆದೋರಿರುವ ಭೂಮಿ ಕುಸಿಯುವ ಆತಂಕ – ಪ್ರಕೃತಿಯ ನಕ್ಷೆಯಲ್ಲಿ ಉಂಟಾದ ಬದಲಾವಣೆಯಂತೆ ಕಾಣಿಸುತ್ತಿರುವ ಇಂಥ ಚಿತ್ರಗಳ ಹಿಂದಿರುವುದು ಮನುಷ್ಯನ ಹಸ್ತಕ್ಷೇಪವೇ. ಪ್ರಕೃತಿಯ ಲಯದಲ್ಲಿ ಸಾಮಾನ್ಯವಾಗಿ ಏರುಪೇರಾಗುವುದಿಲ್ಲ. ವಿಪರೀತ ಏರುಪೇರು ಕಾಣಿಸಿಕೊಂಡಲ್ಲಿ, ಅದು ಪ್ರಾಕೃತಿಕ ವಿಕೋಪಕ್ಕೂ ಹೆಚ್ಚಾಗಿ ಮನುಷ್ಯನ ಹಸ್ತಕ್ಷೇಪವೇ ಆಗಿರುತ್ತದೆ.

ಪ್ರಾಕೃತಿಕ ದುರಂತಗಳು ಸಂಭವಿಸಿದಾಗ ವ್ಯವಸ್ಥೆಯ ಗಮನ, ದುರಂತದಿಂದ ಅಸ್ತವ್ಯಸ್ತಗೊಂಡ ಸ್ಥಾವರಗಳನ್ನು ಸರಿಪಡಿಸುವುದು ಹಾಗೂ ಸಂತ್ರಸ್ತರಿಗೆ ಸೂರು ಒದಗಿಸುವುದಾಗಿರುತ್ತದೆ. ಯಾವುದೇ ಒಂದು ನಾಗರಿಕ ವ್ಯವಸ್ಥೆ ಯೋಚಿಸಬೇಕಾದುದೇ ಹೀಗೆ. ಆದರೆ, ಸಂತ್ರಸ್ತ ಬದುಕುಗಳನ್ನು ಸರಿಪಡಿಸುವುದರ ಜೊತೆಜೊತೆಗೆ ಸಂತ್ರಸ್ತ ಪ್ರಕೃತಿಯನ್ನು ಸರಿಪಡಿಸುವುದರತ್ತ ನಮ್ಮ ಗಮನಹರಿಯದೆ ಹೋದರೆ, ನಮ್ಮ ಪರಿಹಾರ ಕಾರ್ಯಕ್ರಮಗಳು ಹೊಸತೊಂದು ಅನಾಹುತಕ್ಕೆ ಮುನ್ನುಡಿ ಬರೆಯುವ ಪ್ರಯತ್ನಗಳೂ ಆಗಿಬಿಡುತ್ತವೆ. ಕರಾವಳಿಯಲ್ಲೋ ಕೊಡಗಿನಲ್ಲೋ ದುರಂತ ಸಂಭವಿಸಿದಾಗ ಮಾನವೀಯ ಸ್ಪಂದನದ ಮಹಾಪೂರ ವ್ಯಕ್ತವಾಗುವುದು ಸರಿ; ಅಂಥ ಸ್ಪಂದನ ಪ್ರಕೃತಿಯ ಕಾಳಜಿಯ ಬಗ್ಗೆ ವ್ಯಕ್ತವಾಗದಿರುವುದು ಅಸಹಜ.

ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಕುರಿತಂತೆ ನಮ್ಮ ಸರ್ಕಾರಗಳಿಗೆ ಸ್ಪಷ್ಟ ನಿಲುವಿಲ್ಲ. ತಜ್ಞರ ಸಮಿತಿಗಳ ವರದಿಗಳನ್ನು ಚರ್ವಿತ ಚರ್ವಣಗೊಳಿಸುವುದರಲ್ಲಿ ಜನ ಪ್ರತಿನಿಧಿಗಳು ತಮ್ಮ ಬುದ್ಧಿವಂತಿಕೆಯನ್ನು ಖರ್ಚು ಮಾಡಿದ್ದಾರೆಯೇ ಹೊರತು, ಘಟ್ಟ ಪ್ರದೇಶಗಳ ಉಳಿವಿಗೆ ಚಿಕ್ಕಾಸಿನ ಪ್ರಯತ್ನವನ್ನೂ ಅವರು ನಡೆಸಿಲ್ಲ. ಪರಿಸರ ಸಂರಕ್ಷಣೆ ಸರ್ಕಾರಗಳ ಬಜೆಟ್‌ಗಳಿಗೆ ಆದ್ಯತೆಯ ವಿಷಯವಾಗಿರುವುದಿಲ್ಲ. ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಗಟ್ಟಿನಲ್ಲಿ ಸಾಮಾಜಿಕ ಕಾಳಜಿಯ ಬಗ್ಗೆ ಚರ್ಚೆಗಳು ನಡೆಯುತ್ತವೆ. ಆದರೆ, ಸಾಮಾಜಿಕ ಕಾಳಜಿಯ ಬಹುತೇಕ ಚರ್ಚೆ ಹಾಗೂ ಕಾರ್ಯಕ್ರಮಗಳು ಪರಿಸರ ಸಂರಕ್ಷಣೆಯನ್ನು ಒಳಗೊಂಡಿರುವುದಿಲ್ಲ. ಪರಿಸರ ಕಾಳಜಿಯನ್ನು ಒಳಗೊಳ್ಳದೆ ಹೋಗುವ ಎಲ್ಲ ಸಾಮಾಜಿಕ ಚಿಂತನೆ ಹಾಗೂ ಕಾರ್ಯಕ್ರಮಗಳು ಅಪೂರ್ಣವಾಗಿರುತ್ತವೆ. ಪರಿಸರ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆಯ ನಡುವಿನ ಗೆರೆಯನ್ನು ಪ್ರಜ್ಞಾಪೂರ್ವಕವಾಗಿ ಅಳಿಸಿ, ಎರಡನ್ನೂ ಅಭಿನ್ನವಾಗಿ ಕಾಣುವಂತಾಗಬೇಕು ಹಾಗೂ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳು ಮಾನವೀಯತೆಯ ನೆಲೆಗಟ್ಟಿನಲ್ಲಿ ರೂಪುಗೊಳ್ಳಬೇಕು – ಇದು ಸಾಧ್ಯವಾಗದೆ ಹೋದಲ್ಲಿ ವಿನಾಶದ ಹಾದಿಯನ್ನು ನಾವೇ ಆಯ್ಕೆ ಮಾಡಿಕೊಂಡಂತಾಗುತ್ತದೆ.

■ ರಘುನಾಥ ಚ.ಹ.